## ‘ಜನ ಸದನ’ ‘ಯುದ್ಧ ಬೇಡ’

‘ದಿ ಪೀಪಲ್ಸ್ ಹೌಸ್’ (ಜನ ಸದನ) ಎಂದು ಪ್ರೀತಿಯಿಂದ ಕರೆಯಲಾಗುವ ‘ಒಪೆರಾ ಹೌಸ್’ ಕಳೆದ 50 ವರ್ಷಗಳಿಂದಲೂ ಸದ್ದು ಮಾಡುತ್ತಲೇ ಇದೆ. ಕಲೆ, ಸಂಗೀತ, ನೃತ್ಯ ಪ್ರದರ್ಶನಗಳು, ಪ್ರಪಂಚದ ಪ್ರಮುಖ ವ್ಯಕ್ತಿಗಳ ಭೇಟಿಗಳೂ ಸೇರಿದಂತೆ ಜಗತ್ತಿನಾದ್ಯಂತದ ಅನೇಕ ಮುಖ್ಯ ಕ್ಷಣಗಳು ದೊಡ್ಡ ಸುದ್ದಿಗಳಾಗಿ ಈ ಕಟ್ಟಡದ ಮೂಲಕ ಸಾಮೂಹಿಕ ಸ್ಮೃತಿಯಲ್ಲಿ ಬೆಸೆದುಕೊಂಡಿವೆ. ಅನೇಕ ರಾಜಕೀಯ, ಸಾಮಾಜಿಕ ವಾಗ್ವಾದಗಳ ನೆಲೆಯೂ ಆಗಿದೆ.

ಕಳೆದ ಅಕ್ಟೋಬರ್ ತಿಂಗಳಲ್ಲಿ ಹಮಾಸ್ ದಾಳಿಯಲ್ಲಿ ಜೀವ ತೆತ್ತ ಇಸ್ರೇಲಿಗಳಿಗೆ ಶ್ರದ್ಧಾಂಜಲಿ ಸಲ್ಲಿಸಲು ಇಸ್ರೇಲಿ ಧ್ವಜದ ಬಣ್ಣಗಳಾದ ನೀಲಿ ಹಾಗೂ ಬಿಳಿ ವಿದ್ಯುತ್ ಬೆಳಕಿನಿಂದ ಒಪೆರಾ ಹೌಸ್ ಕಂಗೊಳಿಸುತ್ತಿದ್ದಂತೆ ಕಟ್ಟಡದ ಸುತ್ತ ನೂರಾರು ಜನರು ಪ್ಯಾಲೆಸ್ಟೀನಿ ಧ್ವಜಗಳನ್ನು ಹಿಡಿದು ಗುಂಪುಗೂಡಿದ್ದರು. ಇಸ್ರೇಲಿ ಧ್ವಜದ ಬಣ್ಣಗಳ ಬೆಳಕು ಪ್ರದರ್ಶಿಸುವ ನ್ಯೂ ಸೌತ್ ವೇಲ್ಸ್ ರಾಜ್ಯ ಸರ್ಕಾರದ ನಿರ್ಧಾರವನ್ನು ಸಿಡ್ನಿಯ ಲಾರ್ಡ್ ಮೇಯರ್ ಕ್ಲೊವರ್ ಮಾರ್ಗರೇಟ್ ಮೂರ್ ಪ್ರಶ್ನಿಸಿದ್ದರು. ‘ನಮ್ಮದು ಬಹು ಸಂಸ್ಕೃತಿಗಳ ಸಮಾಜ; ಹೆಚ್ಚಿನ ಸಂಖ್ಯೆಯ ಮುಸ್ಲಿಂ ಹಾಗೂ ಯಹೂದಿಗಳು ಇಲ್ಲಿದ್ದಾರೆ. ಇಸ್ರೇಲ್, ಪ್ಯಾಲೆಸ್ಟೀನ್ ಜನರೂ ಇಲ್ಲಿದ್ದಾರೆ. ಈ ಎರಡೂ ಸಮುದಾಯಗಳನ್ನು ನಾವು ಬೆಂಬಲಿಸಬೇಕು’ ಎಂದು ಆಕೆ ಹೇಳಿದ್ದರು.

ಈ ಹಿಂದೆ, ಇರಾಕ್ ಯುದ್ಧದ ಸಂದರ್ಭದಲ್ಲಿ 2003ರ ಮಾರ್ಚ್ 18ರಂದು ಒಪೆರಾ ಹೌಸ್ ಎತ್ತರದ ಚಿಪ್ಪಿನ ಮೇಲೆ ‘ನೋ ವಾರ್’ (ಯುದ್ಧ ಬೇಡ) ಎಂದು ಕೆಂಬಣ್ಣದ ಪೇಂಟ್ ಬಳಸಿ ಬರೆಯುವ ಮೂಲಕ ಪ್ರತಿಭಟನೆ ದಾಖಲಿಸಿದ್ದವರು ಸಾಮಾಜಿಕ ಹೋರಾಟಗಾರ ಡೇವ್ ಬರ್ಜೆಸ್ ಹಾಗೂ ಅವರ ಗೆಳೆಯ ವಿಲ್ ಸಾಂಡರ್ಸ್. ಯುದ್ಧ ಬೇಡವೆಂಬ ಶಾಂತಿ ಸಂದೇಶವನ್ನು ಜಗತ್ತಿಗೆ ತಲುಪಿಸುವುದು ತಮ್ಮ ಉದ್ದೇಶವಾಗಿತ್ತು ಎಂದು ಬರ್ಜೆಸ್ ಅವರು ಇತ್ತೀಚೆಗೆ ‘ಅಲ್ ಜಜೀರಾ’ ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಆನಂತರ ದಂಡ ಹಾಗೂ ಜೈಲು ಶಿಕ್ಷೆಯನ್ನೂ ಅವರು ಅನುಭವಿಸಿದ್ದರು.

ಮಾಡಿಕೊಳ್ಳಬೇಕು ಎಂಬಂಥ ಮೂರನೇ ದೊರೆ ಜಾರ್ಜ್ ಆದೇಶದ ಮೇರೆಗೆ, ವಸಾಹತುಗಾರರಿಗೆ ನೆರವು ನೀಡುವುದಕ್ಕಾಗಿ 1789ರ ನವೆಂಬರ್‌ನಲ್ಲಿ ಬೆನ್ನೆಲಾಂಗ್‌ನನ್ನು ಸೆರೆಹಿಡಿಯಲಾಯಿತು. ಆದರೆ, ಆತ 1790ರ ಮೇ 3ರಂದು ಗವರ್ನರ್ ಫಿಲಿಪ್ ಅವರ ಮನೆಯಿಂದ ತಪ್ಪಿಸಿಕೊಂಡ. ಬೆನ್ನೆಲಾಂಗ್‌ನ ಸ್ವಾತಂತ್ರ್ಯ ಕಸಿದುಕೊಳ್ಳುತ್ತಿರುವ ಆಕ್ರಮಣಕಾರರನ್ನು ಶಿಕ್ಷಿಸಬೇಕು ಎಂಬಂಥ ಮೂಲನಿವಾಸಿಗಳ ನಂಬಿಕೆಯ ಆಧಾರದಲ್ಲಿ ‘ಅಬಾರಿಜಿನಲ್ ವಾರಿಯರ್’ನಿಂದ (ಮೂಲನಿವಾಸಿ ಯೋಧ) ಫಿಲಿಪ್ ಭುಜಕ್ಕೆ ಭರ್ಜಿಯ ತಿವಿತದ ನಂತರ ಬೆನ್ನೆಲಾಂಗ್‌ನನ್ನು ಶಾಂತಿಯುತವಾಗಿ ಮರಳಿಸಲಾಯಿತು. ನಂತರ, ಬೆನ್ನೆಲಾಂಗ್‌ಗೆ ಇಟ್ಟಿಗೆಯ ಮನೆಯೊಂದನ್ನು ಫಿಲಿಪ್ ಕಟ್ಟಿಸಿಕೊಟ್ಟ. ಅದು ‘ಬೆನ್ನೆಲಾಂಗ್ ಪಾಯಿಂಟ್’ ಎಂದು ಹೆಸರಾಯಿತು.

ಬರಾಂಗರೂ 1791ರಲ್ಲಿ ಮಣ್ಣಿನ ಗುಡಿಸಿಲು ನಿರ್ಮಾಣವಾದ ವರ್ಷದಂದೇ ಹೆಣ್ಣುಮಗುವಿಗೆ ಜನ್ಮ ನೀಡಿದ ನಂತರ ತೀರಿಕೊಳ್ಳುತ್ತಾಳೆ. ಈಗ ಸರ್ಕ್ಯುಲರ್ ಕೀ ಆಗಿರುವ ಗವರ್ನರ್ ಫಿಲಿಪ್ ತೋಟದಲ್ಲಿ ಆಕೆಯ ಬೂದಿಯನ್ನು ಬೆನ್ನೆಲಾಂಗ್ ಪಸರಿಸಿದ್ದ. ಬಂದರಿನ ಬಳಿಯ ಉದ್ಯಾನವನ ಹಾಗೂ ಕೆಸಿನೊ ಒಂದಕ್ಕೆ ಈಗ ಆಕೆಯ ಹೆಸರಿಡಲಾಗಿದೆ. ಬೆನ್ನೆಲಾಂಗ್ ಹೆಸರೂ ಅಮರವಾಗಿದ್ದು, ಒಪೆರಾ ಹೌಸ್ ಇರುವ ಜಾಗದ ಹೆಸರು ‘ಬೆನ್ನೆಲಾಂಗ್ ಪಾಯಿಂಟ್’. ಇಲ್ಲಿ ಮಾಂತ್ರಿಕ ಶಕ್ತಿ ಬಿಡುಗಡೆಯಾಗುತ್ತದೆ ಎಂದು ‘ಇಯೊರಾ ನೇಷನ್’ನ ಅಬೊರಿಜನಲ್ ಹಿರಿಯರು ನಂಬುತ್ತಾರೆ. ಏಕೆಂದರೆ, ಸಮುದ್ರ ತೀರದ ಉಪ್ಪು ನೀರು ‘ಪರಾಮಟ್ಟಾ’ ಹೆಸರಿನ ನದಿಯ ಸಿಹಿ ನೀರಿನ ಜೊತೆ ಬೆರೆಯುವ ಜಾಗವಿದು. ಒಪೆರಾ ಹೌಸ್ ಕಟ್ಟಡದ ವಿನ್ಯಾಸವು ಯೂರೋಪ್–ಆಸ್ಟ್ರೇಲಿಯಾ ಬೆರೆತಂತಹ ಸಂಗಮ ಎಂದೂ ಬಣ್ಣಿಸಲಾಗುತ್ತದೆ.

### ಪೋಸ್ಟರ್‌ಗಳ ಪ್ರದರ್ಶನ

ಸಿಡ್ನಿ ಒಪೆರಾ ಹೌಸ್‌ನಲ್ಲಿ ನಡೆದ ಪ್ರದರ್ಶನಗಳು, ಸಮಾರಂಭಗಳ ಕುರಿತಾದ ಸುಮಾರು 2000 ಪೋಸ್ಟರ್‌ಗಳನ್ನು ರಾಜ್ಯದ ಪತ್ರಾಗಾರ ಸಂಗ್ರಹ ಹೊಂದಿದೆ. 1973ರಿಂದ 2000ದ ದಶಕದವರೆಗಿನ ಹಾದಿಯನ್ನು ಈ ಸಂಗ್ರಹ ಪರಿಚಯಿಸುತ್ತದೆ. ಪೋಸ್ಟರ್ ವಿನ್ಯಾಸಗಳಲ್ಲಿ ಕಾಲದಿಂದ ಕಾಲಕ್ಕೆ ಆದ ಬದಲಾವಣೆಗಳನ್ನೂ ಇದು ದಾಖಲಿಸುತ್ತದೆ. ಹ್ಯಾಂಡ್ ಕಲರಿಂಗ್‌ನಿಂದ ಆಫ್ ಸೆಟ್, ಲಿಥೊಗ್ರಫಿ ಹಾಗೂ ಡಿಜಿಟಲ್ ಪ್ರತಿಕೃತಿಗಳವರೆಗಿನ ವೈವಿಧ್ಯಗಳು ಕಣ್ಮನ ಸೆಳೆಯುತ್ತವೆ.




ಕರ್ನಾಟಕದ ಸರೋದ್ ಮಾಂತ್ರಿಕ ರಾಜೀವ್ ತಾರಾನಾಥ್ ಕಾರ್ಯಕ್ರಮದ ಪೋಸ್ಟರ್

### ವಾಸ್ತುಶಿಲ್ಪದ ಮೇರುಕೃತಿ

ವಾಸ್ತವವಾಗಿ, ವಾಸ್ತುಶಿಲ್ಪದ ಗಡಿಗಳನ್ನು ವಿಸ್ತರಿಸುವ ಪ್ರಯೋಗಗಳನ್ನು ಮಾಡಿದವರು ಉಟ್ಜಾನ್. ತಾವು ವಿನ್ಯಾಸ ಮಾಡಿದ ಕಟ್ಟಡಗಳನ್ನು, ನಿರ್ಮಾಣ ಕ್ಷೇತ್ರದಲ್ಲಿನ ಹೊಸ ತಂತ್ರಜ್ಞಾನಗಳಿಗೆ ಪ್ರಯೋಗರಂಗ ಮಾಡಿಕೊಂಡವರು ಅವರು. ರಾಚನಿಕ (ಸ್ಟ್ರಕ್ಚರಲ್) ವಿನ್ಯಾಸಕ್ಕೆ ಕಂಪ್ಯೂಟರ್‌ಗಳ ಬಳಕೆ ಆಗಿನ್ನೂ ಶೈಶವಾವಸ್ಥೆಯಲ್ಲಿತ್ತು. ಕಂಪ್ಯೂಟರ್‌ಗಳಿಲ್ಲದೆ ಛಾವಣಿಯ ಚಿಪ್ಪುಗಳನ್ನು (ರೂಫ್ ಶೆಲ್ಸ್) ರೂಪಿಸುವುದು ಸಾಧ್ಯವೇ ಇರಲಿಲ್ಲ. ಹಡಗಿನ ಗಾಳಿಪಟಗಳಂಥ ಬಿಳಿ ಛಾವಣಿ, ಒಪೆರಾ ಹೌಸ್‌ನ ಅದ್ಭುತ ವಾಸ್ತುವಿನ್ಯಾಸ. ಸಿಡ್ನಿಯ ಸೂರ್ಯನ ಕಿರಣಗಳಲ್ಲಿ ಭಿನ್ನಭಿನ್ನವಾಗಿ ಹೊಳೆಯುವ ಈ ಶ್ವೇತವರ್ಣ, ನಗರದ ಸುತ್ತಲ ಗಾಢ ಬಣ್ಣಗಳ ಜೊತೆಗೆ ನೀಡುವ ದೃಶ್ಯವೈಭವ ಅಸಾಧಾರಣ.

2007ರಲ್ಲಿ, ವಿಶ್ವ ಪಾರಂಪರಿಕ ಪಟ್ಟಿಗೆ ಒಪೆರಾ ಹೌಸ್ ಸೇರ್ಪಡೆಯಾಯಿತು. ನಿರ್ಮಾಣವಾದ ಅತಿ ಕಡಿಮೆ ವರ್ಷಗಳಲ್ಲೇ ಈ ಪಟ್ಟಿಗೆ ಸೇರ್ಪಡೆಯಾದ ಸಾಂಸ್ಕೃತಿಕ ಕಟ್ಟಡ ಇದು. ಈ ಔನ್ನತ್ಯಕ್ಕೆ ಒಪೆರಾ ಹೌಸ್ ಪರಿಗಣಿತವಾದದ್ದನ್ನು ಸ್ವತಃ ಕಂಡ ಅದೃಷ್ಟಶಾಲಿಯಾಗಿದ್ದರು ಉಟ್ಜಾನ್.

2003ರ ಏಪ್ರಿಲ್‌ನಲ್ಲಿ ಜಾರ್ನ್ ಉಟ್ಜಾನ್‌ಗೆ 85 ವರ್ಷವಾಗಿದ್ದಾಗ, ವಾಸ್ತುಶಿಲ್ಪದ ನೊಬೆಲ್ ಎನಿಸಿದ ಪ್ರಿಟ್ಝ್‌ಕರ್ ಪ್ರಶಸ್ತಿ ನೀಡಲಾಯಿತು. ಆ ಪ್ರಶಸ್ತಿ ಪತ್ರದಲ್ಲಿದ್ದ ನುಡಿಗಳಿವು: ‘ಸಿಡ್ನಿ ಒಪೆರಾ ಹೌಸ್ ಉಟ್ಜಾನ್‌ರ ಮೇರುಕೃತಿ ಎನ್ನುವುದರಲ್ಲಿ ಎರಡು ಮಾತಿಲ್ಲ. ಇದು 20ನೇ ಶತಮಾನದ ಅತಿ ದೊಡ್ಡ ಅಪ್ರತಿಮ ಕಟ್ಟಡ. ವಿಶ್ವದಾದ್ಯಂತ ಖ್ಯಾತಿ ಗಳಿಸಿರುವ ಈ ಅದ್ಭುತ ಸೌಂದರ್ಯದ ಖನಿ ಸಿಡ್ನಿ ನಗರಕ್ಕೆ ಮಾತ್ರವಲ್ಲ, ಇಡೀ ಆಸ್ಟ್ರೇಲಿಯಾ ದೇಶ ಹಾಗೂ ಖಂಡಕ್ಕೇ ಸಂಕೇತವಾಗಿರುವಂತಹದ್ದು’.

ಒಪೆರಾ ಹೌಸ್ ನಂತರ, ಜಾರ್ನ್ ಉಟ್ಜಾನ್ ಅವರ ಮತ್ತೊಂದು ಪ್ರಮುಖ ವಾಸ್ತುಶಿಲ್ಪ ವಿನ್ಯಾಸದ ಕಟ್ಟಡವೆಂದರೆ 1982ರಲ್ಲಿ ಪೂರ್ಣಗೊಂಡ ಕುವೈತ್‌ನ ನ್ಯಾಷನಲ್ ಅಸೆಂಬ್ಲಿ. ಉಟ್ಜಾನ್ ಅವರ ಇಳಿವಯಸ್ಸಿನ ಹೊತ್ತಿನಲ್ಲೂ, ‘ನಿರ್ಮಿತಿಗೊಂಡ ಕಟ್ಟಡ ನೋಡಲು ಆಸೆಯಿಲ್ಲವೇ?’ ಎಂಬಂಥ ಸಿಡ್ನಿ ಪತ್ರಕರ್ತರ ಕುತೂಹಲದ ಪ್ರಶ್ನೆಗಳಿಗೆ ‘ಪ್ರತಿ ರಾತ್ರಿ ನನ್ನ ಮನಸ್ಸಿನಲ್ಲಿ ನೋಡುತ್ತೇನೆ’ ಎಂದಿದ್ದರು.

ಚಿತ್ರಗಳು: ಪರಮೇಶ್ವರ ಗುರುಸ್ವಾಮಿ ಹಾಗೂ ಲೇಖಕರವು

ಪ್ರತಿಕ್ರಿಯಿಸಿ: **feedback@sudha.co.in**